

# ನುಡಿದಂತೆ ನಡೆದವರು

ಅನೇಕ ಜನ ತಮ್ಮ ಜೀವಿತ ಕಾಲದಲ್ಲಿ ನುಡಿದಂತೆ ನಡೆಯುತ್ತಾರೆ. ಕೊಟ್ಟ ಮಾತಿಗೆ ತಪ್ಪುವುದಿಲ್ಲ. ಅಂತಹ ವ್ಯಕ್ತಿಗಳಲ್ಲಿ ಫ್ರಾನ್ಸ್ ದೇಶದ ಚಕ್ರವರ್ತಿ (ಅಧಿಪತಿ) ನೆಪೋಲಿಯನ್ ಬೋನೋಪಾರ್ಟ್ ಒಬ್ಬ. ಈ ಜಗತ್ ಪ್ರಸಿದ್ಧ ವ್ಯಕ್ತಿಯ ಬಗ್ಗೆ, ಅವನ ಬಾಲ್ಯದ ಬಗ್ಗೆ ನಿಮಗೆ ಗೊತ್ತೇ?

ನೆಪೋಲಿಯನ್ ಫ್ರಾನ್ಸ್ ದೇಶದ ಸಣ್ಣ ಹಳ್ಳಿಯೊಂದರಲ್ಲಿ ಅತ್ಯಂತ ಬಡ ಕುಟುಂಬದಲ್ಲಿ ಜನಿಸಿದವನು. ಮನೆಯಲ್ಲಿ ಕಿತ್ತು ತಿನ್ನುವ ಬಡತನ, ಅವನು ಹೋಗುತ್ತಿದ್ದ ಶಾಲೆಯ ಪಕ್ಕದಲ್ಲೇ ಮುದುಕಿಯೊಬ್ಬಳು ಹಣ್ಣಿನ ಅಂಗಡಿ ಇಟ್ಟಿದ್ದಳು. ಶಾಲೆಯ ಇತರ ಮಕ್ಕಳು ಅವಳಿಂದ ಹಣ್ಣು ಕೊಂಡು ತಿನ್ನುತ್ತಿದ್ದರು. ಆದರೆ ಹಣ್ಣು ಕೊಳ್ಳಲು ನೆಪೋಲಿಯನ್ ಹತ್ತಿರ ಹಣವಿರುತ್ತಿರಲಿಲ್ಲ. ಹಾಗಾಗಿ ದೂರದಲ್ಲಿ ನಿಂತು ಹಣ್ಣು ತಿನ್ನುವ ಮಕ್ಕಳತ್ತ ಆಸೆ ಕಣ್ಣಿಂದ ನೋಡುತ್ತಿದ್ದನು. ಒಂದು ದಿನ ಧೈರ್ಯ ಮಾಡಿ ಹಣ್ಣು ಮಾರುವವಳ ಹತ್ತಿರ ಹೋಗಿ 'ಅಜ್ಜೀ ನನಗೆ ಹಣ್ಣನ್ನು ಸಾಲವಾಗಿ ಕೊಡುತ್ತೀಯಾ? ನಾನು ದೊಡ್ಡವನಾಗಿ ಕೆಲಸಕ್ಕೆ ಸೇರಿ ನಿನ್ನ ಸಾಲವನ್ನು ತೀರಿಸುತ್ತೇನೆ' ಎಂದು ಕೇಳಿಕೊಂಡಾಗ ಹಣ್ಣು ಮಾರುವವಳು ಅವನ ಮೇಲೆ ದಯೆ ತೋರಿ ಅವನು ಆ ಶಾಲೆಯಲ್ಲಿ ತನ್ನ ವಿದ್ಯಾಭ್ಯಾಸ ಮುಗಿಸುವವರೆಗೂ ಪ್ರತಿನಿತ್ಯ ಅವನಿಗೆ ಹಣ್ಣು ಕೊಡುತ್ತಿದ್ದಳಂತೆ. ನೆಪೋಲಿಯನ್ ಗೆಳೆಯರೊಡನೆ ಸಂತೋಷದಿಂದ ಹಣ್ಣು ತಿನ್ನುವುದನ್ನು ನೋಡಿ ಆ ಹಣ್ಣಿನವಳೂ ಸಂತೋಷಪಡುತ್ತಿದ್ದಳಂತೆ.

1789ರಲ್ಲಿ ಫ್ರಾನ್ಸ್‌ನಲ್ಲಿ ಕ್ರಾಂತಿ ಪ್ರಾರಂಭವಾದಾಗ ನೆಪೋಲಿಯನ್ ತಾನೂ ಸೈನ್ಯಕ್ಕೆ ಸೇರಿ, ಸೇನೆಯಲ್ಲಿ ಹಂತ ಹಂತವಾಗಿ ಮೇಲೇರಿದನು. ಶೌರ್ಯದಿಂದ ಕಾದಾಡಿದ ಅವನ ಹೆಸರು ಪ್ರಪಂಚದ ಮೂಲೆ ಮೂಲೆಗೂ ಹರಡಿತು. ನೆಪೋಲಿಯನ್ ಹಂತ ಹಂತವಾಗಿ ಮೇಲೇರಿದರೂ ತನಗೆ ಪ್ರತಿನಿತ್ಯ ಹಣ್ಣು ನೀಡುತ್ತಿದ್ದ ಮಹಿಳೆಯನ್ನು ಮಾತ್ರ ಮರೆಯಲಿಲ್ಲ. ಒಮ್ಮೆ ಸ್ವತಃ ಹಣ್ಣಿನ ಮುದುಕಿಯನ್ನು ಹುಡುಕಿಕೊಂಡು ಹೋಗಿ ತನ್ನ ಹಿಂದಿನ ಸಾಲವನ್ನೆಲ್ಲಾ ತೀರಿಸಿದನಲ್ಲದೆ ಅವಳಿಗೆ ತನ್ನ ವ್ಯಾಪಾರವನ್ನು ವಿಸ್ತರಿಸಲು ಸಹಾಯ ಮಾಡಿದನು.

ತನ್ನನ್ನು ತಾನೇ ಫ್ರಾನ್ಸ್ ಸಾಮ್ರಾಜ್ಯಕ್ಕೆ ಅಧಿಪತಿ ಎಂದು ಘೋಷಿಸಿಕೊಂಡು ಫ್ರಾನ್ಸ್ ದೇಶವನ್ನಾಳಿದ ನೆಪೋಲಿಯನ್ ಸೇನೆಯಲ್ಲಿ ಕೆಲಸ ಮಾಡುವವರ ಕಷ್ಟಗಳನ್ನು ಚೆನ್ನಾಗಿ ಅರಿತಿದ್ದನಾದುದರಿಂದ, ತಾನು ಸಾಯುವ ಮೊದಲು ತನ್ನಲ್ಲಿದ್ದ ಸುಮಾರು ಇನ್ನೂರು ಕೋಟಿ ಫ್ರಾಂಕ್ ಹಣವನ್ನು, ತನ್ನ ಜೊತೆ ಸೈನ್ಯದಲ್ಲಿ ಕೆಲಸ ಮಾಡುತ್ತಿದ್ದ ಮರಣ ಹೊಂದಿದವರ ಮತ್ತು ಬದುಕಿ ಉಳಿದು ನೋಯುತ್ತಿದ್ದವರ ಕಲ್ಯಾಣಕ್ಕಾಗಿ ಉಪಯೋಗಿಸಬೇಕೆಂದು ಉಯಿಲು (ವಿಲ್) ಬರೆದಿದ್ದಲೆನ್ನಲಾಗಿದೆ. ಇದಲ್ಲವೇ ಪರೋಪಕಾರ!

**-ಶಾಂತಾ ನಾಗರಾಜ್ ಕೆ. ಬೆಂಗಳೂರು**